Region: Bangalore

Client : Bangalore Nano 2008

Lead : nano to fulfill people's Requirement

Publication : Samyuktha Karnataka

Date : 14 Dec 2008

Section : Pg-5

Method : Conference

## ಜನರ ಅಗತ್ಯ ಪೂರೈಸುವತ್ತ ನ್ಯಾನೋ ಅಭಿವೃದ್ಧಿ: ಉಪರಾಷ್ಟ್ರಪತಿ

**ಬೆಂಗಳೂರು, ಡಿ. 13:** ಸಾರ್ವಜನಿಕರ ಅಗತ್ಯಗಳನ್ನು ಪೂರೈಸುವತ್ತ ನ್ಯಾನೋ ತಂತ್ರಜ್ಞಾನ ಅಭಿವೃದ್ಧಿಗೊಳ್ಳಬೇಕು ಎಂದು ಉಪರಾಷ್ಟ್ರಪತಿ ಎಂ.ಹಮೀದ್ ಅನ್ಸಾರಿ ಆಶಿಸಿದರು.

ಸಾರ್ವಜನಿಕರ ಕಲ್ಯಾಣ, ಆರ್ಥಿಕ ಅಭಿವೃದ್ಧಿ ವಿಶೇಷವಾಗಿ ಕೃಷಿಕರಿಗೆ ಹಾಗೂ ಗ್ರಾಹಕರ ಅಗತ್ಯಗಳಿಗೆ ಅನುಗುಣವಾಗಿ ನ್ಯಾನೋ ಸಂಶೋಧನೆ ಕೊಡುಗೆ ನೀಡುವುದಾದರೆ ಹೆಚ್ಚು ಅರ್ಥಪೂರ್ಣವಾಗುತ್ತದೆ ಎಂದು ಅವರು ಸಲಹೆ ನೀಡಿದರು.

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಹಾಗೂ ನ್ಯಾನೋ ತಂತ್ರಜ್ಞಾನ ದಾರ್ಶನಿಕ ತಂಡ ಸಂಯುಕ್ತವಾಗಿ ಶನಿವಾರ ಆಯೋಜಿಸಿದ್ದ ಬೆಂಗಳೂರು ನ್ಯಾನೋ ಪ್ರಕಟಣೆ ಮತ್ತು ಘೋಷಣೆಯ ಉದ್ಘಾಟನೆ ಹಾಗೂ 2ನೇ ಬೆಂಗಳೂರು ನ್ಯಾನೋ ರಾಷ್ಟ್ರೀಯ ಪ್ರಶಸ್ತಿ ಪ್ರಧಾನ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು. ಕೃಷಿ ಕ್ಷೇತ್ರವು ಭಾರತದ ಜೀವಾಳವಾಗಿದೆ. ಆ ಕ್ಷೇತ್ರದಲ್ಲಿ ನೂತನ ಆವಿಷ್ಕಾರಗಳಾದರೆ ರೈತರ ಅಭಿವೃದ್ಧಿಗೆ ನೆರವಾಗುವುದು. ನ್ಯಾನೋ ತಂತ್ರಜ್ಞಾನ- ಸಂಶೋಧನೆಗಳಿಗೆ ಸಾರ್ವಜನಿಕರ ಹಣ ವಿನಿಯೋಗಿಸಲಾಗುತ್ತದೆ ಎಂಬ ಅಂಶವನ್ನು ವಿಜ್ಞಾನಿಗಳು ಕಂಡುಕೊಳ್ಳಬೇಕು ಎಂದರು.

2ನೇ ಬೆಂಗಳೂರು ನ್ಯಾನೋ ಪ್ರಕಟಣೆ ಮತ್ತು ಘೋಷಣೆ ಪತ್ರವನ್ನು ಬಿಡುಗಡೆ ಮಾಡಿದ ರಾಜ್ಯಪಾಲ ರಾಮೇಶ್ವರ ಠಾಕೂರ್, ಬೆಂಗಳೂರು ನ್ಯಾನೋದಿಂದ ಸಾರ್ವಜನಿಕರಲ್ಲಿ ಕುತೂಹಲ ಸೃಷ್ಟಿಸಿದೆ ಮಾತ್ರವಲ್ಲ ನಿರೀಕ್ಷೆಗಳನ್ನು ಇಟ್ಟುಕೊಂಡಿದ್ದಾರೆ. ಅವರ ಆಶಯಗಳತ್ತ ನ್ಯಾನೋ ಸ್ಪಂದಿಸಬೇಕು. ಸರ್ಕಾರ ಈ ನಿಟ್ಟಿನಲ್ಲಿ ಸಕಲ ಸೌಲಭ್ಯಗಳನ್ನು ನೀಡುತ್ತದೆ ಎಂದು ಹೇಳಿದರು.

**ರಾಷ್ಟ್ರೀಯ ಪ್ರಶಸ್ತಿ:** ಭಾರತೀಯ ರಾಷ್ಟ್ರೀಯ ವಿಜ್ಞಾನ ಅಕಾಡೆಮಿಯ ಗೌರವಾನ್ವಿತ ವಿಜ್ಞಾನಿ ದೀಪಾಂಕ ಚಕ್ರವರ್ತಿ ಅವರ ಸೇವೆಗಾಗಿ ಉಪರಾಷ್ಟ್ರಪತಿ ಎಂ. ಹಮೀದ್ ಅನ್ಸಾರಿ '2ನೇ ಬೆಂಗಳೂರು ನ್ಯಾನೋ ರಾಷ್ಟ್ರೀಯ ಪ್ರಶಸ್ತಿ' ನೀಡಿ ಗೌರವಿಸಿದರು. ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಸುಧಾಕರ ರಾವ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಮಾಹಿತಿ ತಂತ್ರಜ್ಞಾನ ಇಲಾಖೆ ಪ್ರಧಾನ ಕಾರ್ಯದರ್ಶಿ ಅಶೋಕಕುಮಾರ ಮನೋಳಿ ಸ್ವಾಗತಿಸಿದರು. ಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಸಮೂಹ ಅಧ್ಯಕ್ಷ ಡಾ.ಅಜಿತ್ ಸಪ್ರೆ ವಂದಿಸಿದರು.